ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಆರ್. ಬಿ. ತಿಮ್ಮಾಪೂರ
(ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1129

ಉತ್ತರಿಸಬೇಕಾದ ದಿನಾಂಕ : 21.09.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಅಧಿಕೃತ ಮತ್ತು ಅನಧಿಕೃತ ಗೃಹ ನಿರ್ಮಾಣ ಸಹಕಾರ ಸಂಘಗಳು ಯಾವುವು; (ಸಂಘಗಳವಾರು ವಿವರಗಳನ್ನು ನೀಡುವುದು)	ರಾಜ್ಯದಲ್ಲಿ ದಿನಾಂಕ:31.03.2021 ರ ಅಂತ್ಯಕ್ಕೆ ಒಟ್ಟು 1828 ಗೃಹ ನಿರ್ಮಾಣ ಸಹಕಾರ ಸಂಘಗಳು ಇದ್ದು, 1187 ಕಾರ್ಯನಿರತ, 279 ಸ್ಥಗಿತ ಮತ್ತು 362 ಸಮಾಪನೆಯಲ್ಲಿರುತ್ತವೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ).
ಆ)	ಆ ಪೈಕಿ, ಯಾವ ಯಾವ ಗೃಹ ನಿರ್ಮಾಣ ಸಹಕಾರ ಸಂಘಗಳು ಯಾವ ಯಾವ ವಿಧದ ಅಕ್ರಮ, ದುರಾಡಳಿತ, ಹಣ ವಂಚನೆ-ಮೋಸಗಳಂತಹ ಕೃತ್ಯಗಳನ್ನು ಎಸಗಿದೆ;	ಗೃಹ ನಿರ್ಮಾಣ ಸಹಕಾರ ಸಂಘಗಳು ತನ್ನ ಸದಸ್ಯರಿಗೆ ಬಡಾವಣೆಗಳನ್ನು ರಚಿಸಲು ಸದಸ್ಯರಿಂದ ಹಣ ಸಂಗ್ರಹಿಸಿ ನಿವೇಶನ ನೀಡುವುದು ಮುಖ್ಯ ಉದ್ದೇಶವಾಗಿರುತ್ತದೆ. ಈ ದಿಸೆಯಲ್ಲಿ ಸಕಾಲದಲ್ಲಿ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡದ, ಬಡಾವಣೆ ಅಭಿವೃದ್ಧಿಗೆ ಸಂಗ್ರಹಿಸಿದ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ, ಅಧಿಕಾರ ದುರುಪಯೋಗಪಡಿಸಿಕೊಂಡಿರುವ ಬಗ್ಗೆ, ನಿವೇಶನ ಠೇವಣಿದಾರರ ಜೇಷ್ಠತಾ ಪಟ್ಟಿ ಉಲ್ಲಂಘನೆ ಬಗ್ಗೆ, ಅಭಿವೃದ್ಧಿದಾರರಿಗೆ ನೀಡಿರುವ ಮೊತ್ತಗಳಲ್ಲಿ ವ್ಯತ್ಯಾಸಗಳಾಗಿರುವ ಬಗ್ಗೆ ದೂರುಗಳು ಸ್ವೀಕೃತವಾದಂತಹ ಪ್ರಸಂಗಗಳು ಹಾಗೂ ಸ್ವಯಂಪ್ರೇರಿತವಾಗಿ ಕಾಯ್ದೆಯಲ್ಲಿ ಅವಕಾಶಗಳ ರೀತ್ಯಾ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64 ರಡಿ ಶಾಸನಬದ್ಧ ವಿಚಾರಣೆ ಹಾಗೂ ಕಲಂ 65 ರ ಶಾಸನಬದ್ಧ ಪರಿವೀಕ್ಷಣೆಗಳನ್ನು ನಡೆಸಲಾಗಿದೆ. ವಿಚಾರಣೆ ಹಾಗೂ ಪರಿವೀಕ್ಷಣೆಗೆ ಆದೇಶಿಸಿರುವ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
ಇ)	ಅಂತಹವುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿನ ಅಕ್ರಮ ದುರಾಡಳಿತ, ವಂಚನೆ ಎಸಗಿರುವ ಪ್ರಕರಣಗಳಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64 ರಡಿ ವಿಚಾರಣೆ ನಡೆಸಲು ಕಲಂ 65 ರಡಿ ಪರಿವೀಕ್ಷಣೆ ನಡೆಸಲು, ಕಲಂ 69ರಡಿ ಅಧಿಭಾರ ಪ್ರಕರಣ ದಾಖಲಿಸಲು, ಕಲಂ 109 ರಡಿ ಕ್ರಿಮಿನಲ್

		ಕ್ರಮ ಜರುಗಿಸಲು ಮತ್ತು 29 ಸಿ ರಡಿ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಪದಾಧಿಕಾರಿಗಳನ್ನು ಅನರ್ಹಗೊಳಿಸಲು ಅವಕಾಶವಿದೆ. ಮೇಲ್ಕಂಡ ಅವಕಾಶದಂತೆ ಕಳೆದ 10 ವರ್ಷಗಳಲ್ಲಿ 47 ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿನ 51 ಪ್ರಕರಣಗಳಲ್ಲಿ ಕಲಂ 64 ರಡಿ ವಿಚಾರಣೆಗೆ ಆದೇಶಿಸಲಾಗಿದೆ. 03 ಪ್ರಕರಣಗಳಲ್ಲಿ ಸಂಘಕ್ಕೆ ಬರಬೇಕಾದ ಬಾಕಿ ಮೊತ್ತಕ್ಕೆ ಅಧಿಭಾರ ಪ್ರಕರಣ ದಾಖಲಿಸಲಾಗಿದೆ. 04 ಪ್ರಕರಣಗಳಲ್ಲಿ ಸಿವಿಲ್/ಕ್ರಿಮಿನಲ್ ಕ್ರಮ ಜರುಗಿಸಲಾಗಿದೆ. ಕಳೆದ 10 ವರ್ಷಗಳಲ್ಲಿ ಒಟ್ಟು 21 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕಲಂ 65 ರಡಿ ಪರಿವೀಕ್ಷಣೆಗೆ ಆದೇಶಿಸಲಾಗಿದೆ. 03 ಪ್ರಕರಣಗಳಲ್ಲಿ ಸಂಘಕ್ಕೆ ಬರಬೇಕಾದ ಬಾಕಿ ಮೊತ್ತಕ್ಕೆ ಅಧಿಭಾರ ಪ್ರಕರಣ ದಾಖಲಿಸಲಾಗಿದೆ. 02 ಪ್ರಕರಣಗಳಲ್ಲಿ ಸಿವಿಲ್/ಕ್ರಿಮಿನಲ್ ಕ್ರಮ ಜರುಗಿಸಲಾಗಿದೆ. 26 ಗೃಹ ನಿರ್ಮಾಣ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರುಗಳನ್ನು ಕಲಂ 29-ಸಿ ರಡಿಯಲ್ಲಿ ನಿರ್ದೇಶಕ ಸ್ಥಾನದಿಂದ ಅನರ್ಹತೆಗೊಳಿಸಲಾಗಿದೆ.

ಸಿಒ 41 ಸಿಹೆಚ್‌ಎಸ್ 2021 (ಇ)

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ-1

ದಿನಾಂಕ:31-03-2021 ಕ್ಕೆ ಇದ್ದಂತೆ ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಮಾಹಿತಿ.

ಕ್ರ.	ಜಿಲ್ಲೆಯ ಹೆಸರು	ಕಾರ್ಯ ನಿರತ	ಸ್ಥಗಿತ	ಸಮಾಪನೆ	ಒಟ್ಟು
1	ಬೆಂಗಳೂರು 1ನೇ ವಲಯ	119	34	18	171
2	ಬೆಂಗಳೂರು 2ನೇ ವಲಯ	87	39	20	146
3	ಬೆಂಗಳೂರು 3ನೇ ವಲಯ	48	17	5	70
4	ಬೆಂಗಳೂರು 4ನೇ ವಲಯ	148	43	20	211
5	ಬೆಂಗಳೂರು ಗ್ರಾಮಾಂತರ ಜಿಲ್ಲೆ	5	8	9	22
6	ತುಮಕೂರು ಜಿಲ್ಲೆ	24	0	16	40
7	ಚಿತ್ರದುರ್ಗ ಜಿಲ್ಲೆ	8	0	10	18
8	ದಾವಣಗೆರೆ ಜಿಲ್ಲೆ	17	3	9	29
9	ಶಿವಮೊಗ್ಗ ಜಿಲ್ಲೆ	29	0	11	40
10	ಕೋಲಾರ ಜಿಲ್ಲೆ	5	11	14	30
11	ಚಿಕ್ಕಬಳ್ಳಾಪುರ ಜಿಲ್ಲೆ	7	0	9	16
12	ರಾಮನಗರ ಜಿಲ್ಲೆ	8	0	2	10
13	ಮೈಸೂರು	251	18	21	290
14	ಚಾಮರಾಜನಗರ.	6	0	2	8
15	ಮಂಡ್ಯ	34	0	8	42
16	ಹಾಸನ	16	7	12	35
17	ಚಿಕ್ಕಮಗಳೂರು	9	0	2	11
18	ಕೊಡಗು	1	0	0	1
19	ದಕ್ಷಿಣ ಕನ್ನಡ	21	1	2	24
20	ಉಡುಪಿ	8	0	1	9
21	ಬೆಳಗಾವಿ	75	10	20	105
22	ವಿಜಯಪುರ	24	1	23	48
23	ಬಾಗಲಕೋಟ	22	4	8	34
24	ಧಾರವಾಡ	91	21	19	131
25	ಗದಗ	20	3	6	29
26	ಹಾವೇರಿ	11	1	9	21
27	ಕಾರವಾರ	13	0	3	16
28	ಬಳ್ಳಾರಿ	16	2	21	39
29	ಬೀದರ	9	13	23	45
30	ಕಲಬುರಗಿ	22	20	24	66
31	ಕೊಪ್ಪಳ	8	8	5	21
32	ರಾಯಚೂರು	19	13	6	38
33	ಯಾದಗಿರಿ	6	2	4	12
	ಒಟ್ಟು	1187	279	362	1828

ಸಹಕಾರ ಸಂಘಗಳ ಅಪರ ನಿಬಂಧಕರು
(ವಸತಿ ಮತ್ತು ಇತರೆ)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಆರ್. ಬಿ. ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಪ್ರಶ್ನೆ ಸಂಖ್ಯೆ 989 (1129) ಕ್ಕೆ ಉತ್ತರ

ಅನುಬಂಧ-2

ಕಲಂ 64 ರಡಿ ವಿಚಾರಣೆಗೆ ಒಳಪಡಿಸಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಹೆಸರು

ಕ್ರ.ಸಂ	ಗೃಹ ನಿರ್ಮಾಣ ಸಹಕಾರ ಸಂಘದ ಹೆಸರು
1	ಹೇಮಗಿರಿ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳುರು
2	ದಯಾಳನ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
3	ಏರ್‌ಕ್ರ್ಯಾಫ್ಟ್ ಎಂಪ್ಲಾಯಿಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ.ಬೆಂಗಳೂರು
4	ಗವಿಪುರಂ ಬಡಾವಣೆ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
5	ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಬೆಂಗಳೂರು.
6	ವಿಜಯಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.
7	ಎನ್.ಟಿ.ಐ. ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
8	ಟೌನ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಹೊಸಕೋಟೆ
9	ಅರ್ಥಮೂವರ್ಸ್ ಕಾರ್ಮಿಕರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
10	ಐ.ಟಿ.ಐ. ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು.
11	ಐ.ಟಿ.ಸಿ. ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು
12	ಹೆಚ್.ಎಂ.ಟಿ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
13	ಕೇತಮಾರನಹಳ್ಳಿ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೆಂಗಳೂರು
14	ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
15	ರೆಂಕೋ ಬಿಹೆಚ್‌ಇಎಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
16	ಕೆ.ಪಿ.ಟಿ.ಸಿ.ಎಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
17	ಅಮರಜ್ಯೋತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ. ಬೆಂಗಳೂರು
18	ಶ್ರೀ ಗುರುಕೃಪ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ. ಬೆಂಗಳೂರು
19	ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಕೋಲಾರ
20	ಪೀಯರ್ ಲೈಟ್ ಲೈನರ್ಸ್ ನೌಕರರ ಹಾಗೂ ಪೂರಕ ಘಟಕಗಳ ಗೃಹ ನಿರ್ಮಾಣ ಸಹಕಾರ ಸಂಘ ನಿ,. ಶಿವಮೊಗ್ಗ.

21	ಮೈಸೂರು ಕಾಗದ ಕಾರ್ಖಾನೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ,. ಭದ್ರಾವತಿ.
22	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು
23	ದಿ ಕಸ್ಟಮ್ಸ್, ಸೆಚಿಟ್ರಲ್ ಎಕ್ಸಜ್‌ಮತ್ತು ಸರ್ವಿಸ್‌ಟ್ಯಾಕ್ಸ್, ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ,. ಸೆಚಿಟ್ರಲ್‌ರೆವಿನ್ಯೂ ಬಿಲ್ಡಿಂಗ್ ಕ್ವೀನ್ಸ್ ರಸ್ತೆ, ಬೆಂಗಳೂರು
24	ನ್ಯಾಯಾಂಗ ಇಲಾಖಾ ನೌಕರರ ಗೃಹನಿರ್ಮಾಣ ಸಹಕಾರ ಸಂಘ, 7/2, ಸೂರ್ಯ ಛೇಂಬರ್ಸ್, 1ನೇ ಮುಖ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20
25	ಜರಗನಹಳ್ಳಿ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
26	ಕರ್ನಾಟಕ ಸರ್ಕಾರ ಸಚಿವಾಲಯ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
27	ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ), ಚಿಂತಾಮಣಿ
28	ಆರ್ಮಿ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
29	ಕನಕ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
30	ರೀಜನಲ್ ಕಾಲೇಜ್ ಆಫ್ ಎಜುಕೇಷನ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
31	ಬಿ.ಇ.ಎಂ.ಎಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಮೈಸೂರು.
32	ಆನಂದ ಗೃಹ ನಿರ್ಮಾಣ ಸಹಕಾರ ಸಂಘ ನಿ. ಮೈಸೂರು.
33	ಭೂಲಕ್ಷ್ಮೀ ಗೃಹ ನಿರ್ಮಾಣ ಸಹಕಾರ ಸಂಘ ನಿ. ಮೈಸೂರು.
34	ಮಾನಸ ಗೃಹ ನಿರ್ಮಾಣ ಸಹಕಾರ ಸಂಘ ನಿ. ಮೈಸೂರು.
35	ಮೈಸೂರು ವಿಶ್ವವಿದ್ಯಾನಿಲಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
36	ಮೈಸೂರು ಚಾಮರಾಜನಗರ ಜಿಲ್ಲಾ ಖಜಾನೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
37	ಮೈಸೂರು ಚಾಮರಾಜನಗರ ಜಿಲ್ಲಾ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
38	ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
39	ನೈರುತ್ಯ ರೈಲ್ವೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು (ಉತ್ತರ)

40	ಕೂಡಲ ಸಂಗಮದೇವ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
41	ಜೆ.ಎಸ್.ಎಸ್. ಮಹಾವಿಧ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
42	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು.
43	ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು
44	ಕಾಲೇಜು ಅಧ್ಯಾಪಕರ ಮತ್ತು ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು.
45	ಮಂಡ್ಯ ನಗರ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮಂಡ್ಯ
46	ಪಾಂಡವಪುರ ತಾಲ್ಲೂಕು ಗೃಹ ನಿರ್ಮಾಣ ಸಹಕಾರ ಸಂಘ ನಿ, ಪಾಂಡವಪುರ
47	ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಕಲಬುರಗಿ.

ಕಲಂ 65 ರಡಿ ಪರಿವೀಕ್ಷಣೆಗೆ ಒಳಪಡಿಸಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಹೆಸರು

1	ಬಿ.ಇ.ಎಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
2	ಸಿಕ್ಯೂಎಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
3	ಡಿ ಗ್ರೂಪ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
4	ಎನ್‌ಜಿಇಎಫ್ ನೌಕರರ ಹಾಗೂ ಮಾಜಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು
5	ಕೆ.ಎಸ್.ಎಫ್.ಸಿ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು
6	ವಿದ್ಯಾಗಿರಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು
7	ಮಿನಿಸ್ಟ್ರಿ ಆಫ್ ಕಮ್ಯೂನಿಕೇಷನ್ ಎಂಪ್ಲಾಯೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೆಂಗಳೂರು
8	ಮಹಾಲಕ್ಷ್ಮಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು
9	ಕರ್ನಾಟಕ ಅರ್ಬನ್ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೆಂಗಳೂರು
10	ಕರ್ನಾಟಕ ರಾಜ್ಯ ರೈತ ಕಾರ್ಮಿಕತರ ವಸತಿ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು
11	ಏರ್‌ಕ್ರಾಫ್ಟ್ ಎಂಪ್ಲಾಯಿಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ.ಬೆಂಗಳೂರು
12	ಮೈಸೂರು ಪೇಪರ್ ಮಿಲ್ಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ಎಂ.ಪಿ.ಎಂ. ಲೇಔಟ್ ಪಾರ್ಕ್, ಎಂಪಿಎಂ ಲೇಔಟ್, ಮಲ್ಲತ್ತಹಳ್ಳಿ, ಬೆಂಗಳೂರು-560056
13	ಭವಾನಿ ಗೃಹ ನಿರ್ಮಾಣ ಸಹಕಾರ ಸಂಘ ನಿ. ನಂ-27, ರಾಮಮಂದಿರ ರಸ್ತೆ, ಕಾವೇರಿ ನಗರ,

	ಬನಶಂಕರಿ 3ನೇ ಹಂತ, ಬೆಂಗಳೂರು-85
14	ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ-7, ಸಂದೇಶ್ ಭವನ್, 3ನೇ ಮೈನ್, 1ನೇ ಹಂತ, ಪೋಸ್ಟ್‌ಲ್ ಕಾಲ್ಲೋನಿ, ಸಂಜಯನಗರ, ಬೆಂಗಳೂರು-560094.
15	ಅಸದಖಾನ ಗೃಹ ನಿರ್ಮಾಣ ಸಹಕಾರ ಸಂಘ (ನಿ) ಬೆಳಗಾವಿ ನಂ:288 ಮುಜಾವರಗಲ್ಲಿ ಬೆಳಗಾವಿ
16.	ಜನರಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಹುಮನಾಬಾದ.
17	ಸರ್ವೋದಯ ಗೃಹ ನಿರ್ಮಾಣ ಸಹಕಾರ ಸಂಘ ನಿ, ತ್ರಿಪುರಾಂತ.
18	ಎನ್.ಜಿ.ಓ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೀದರ.
19	ಸರಕಾರಿ ಹಾಗೂ ಅರೆ ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೀದರ.
20	ಕೇಂದ್ರ ಹಾಗೂ ರಾಜ್ಯ ಸರಕಾರಿ ಅರೆ ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೀದರ.
21	ಅಂಚೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೀದರ.

ಸಹಕಾರ ಸಂಘಗಳ ಅಪರ ನಿಬಂಧಕರು,
(ವಸತಿ ಮತ್ತು ಇತರೆ)